# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189,ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 18-12-2021 ರಂದು ಮಧ್ಯಾಹ್ನ 03:00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ ಮಾಲತಿ | ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) | 9480683015 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ / ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 189, ಹೊಂಗಸಂದ್ರ | 7795356105 |
| 3 | ಶ್ರೀ ನಾಗಭೂಷಣ.ಆರ್ | ಸದ್ಯಸರು | 9945488118 |
| 4 | ಶ್ರೀ ಮುನಿರಾಜು | ಸದ್ಯಸರು | 9739400706 |
| 5 | ಶ್ರೀ ಡಿ.ಎಸ್ ಕುಲಕರ್ಣಿ | ಸದ್ಯಸರು | 9448841976 |
| 6 | ಶ್ರೀ ಡಾ ರಂಗರಾಜನ್ | ಪ್ರ.ಆ.ಕೇ ವೈದ್ಯಧಿಕಾರಿಗಳು | |
| 7 | ಶ್ರೀ ಸಂತೋಷ ಪ್ರಸದ್. ಎಮ್ | ಸಹಾಯಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ) | 9972001265 |
| 8 | ಶ್ರೀ ಮಹೇಶ್ ಕುಮಾರ್.ಎಸ್ | ಕಿರಿಯ ಅಭಿಯಂತರರು, ಬೆಸ್ಕಾಂ | 9845814548 |
| 9 | ಶ್ರೀ ವಿನೋದ್ ಕುಮಾರ್ .ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 189 | 9886597387 |

- ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿಲ್ಲಾಗಿ ಸಭೆಯನ್ನು ಪ್ರಾರಂಭಿಸಿದರು
- <u>ಆರೋಗ್ಯ ಇಲಾಖೆ (ಕೋವಿಡ್-19) :-</u>
  1. ಶ್ರೀ ಡಾ ರಂಗರಾಜನ್ ಬಿ, ವೈದ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ದಿನಾಂಕ: 26.11.2021 ರಿಂದ 18.12.2021 ರವರೆಗೆ ಕೋವಿಡ್ ಪರೀಕ್ಷೆ ನೀಡಿರುವ ಬಗ್ಗೆ ವಿವರಿಸುತ್ತಾ, ಒಟ್ಟು 04 ಕೋವಿಡ್ ಪ್ರಕರಣವು ವರದಿಯಾಗಿರುತ್ತದೆ ಹಾಗೂ ಈ ವಾರ್ಡ್‌ನಲ್ಲಿ ಯಾವುದೇ ಓಮಿಕ್ರಾನ್ ಪ್ರಕರಣವು ವರದಿಯಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು.
  2. ವಾರ್ಡ್ ವ್ಯಾಪ್ತಿಯಲ್ಲಿ ಶೇ 72% ಜನಸಂಖ್ಯೆ ಕೋವಿಡ್-19 ಲಸಿಕೆ ಪಡೆದುಕೊಂಡಿರುವ ಬಗ್ಗೆ ಶ್ರೀ ಡಾ ರಂಗರಾಜನ್ ಬಿ, ವೈದ್ಯರು ಸಭೆಗೆ ತಿಳಿಸಿದರು.

Scanned with

3. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯುಲ್ಲಿ ಇದುವರೆಗೂ ಮೊದಲನೇ ಲಸಿಕೆಯನ್ನು ಪಡೆದೆ ಇರುವವರಿಗೆ ಎನ್.ಜಿ.ಓ ತಂಡದೊಂದಿಗೆ ನಮ್ಮ ವೈದ್ಯರು, ಸ್ಟಾಫ್ ನರ್ಸ್ ಮತ್ತು ಸಿಬ್ಬಂದಿರವರು ಲಸಿಕೆ ಹಾಕಿಸಿಕೊಳ್ಳಲು ಅರಿವು ಮೂಡಿಸಿ ಲಸಿಕೆ ನೀಡಲು ಕ್ರಮ ವಹಿಸಲಾಗುತ್ತಿರುತ್ತದೆ ಎಂದು ಶ್ರೀ ಡಾ ರಂಗರಾಜನ್ ಬಿ, ವೈದ್ಯರು ರವರು ಸಭೆಗೆ ತಿಳಿಸಿದರು

- **<u>ಘನತ್ಯಾಜ್ಯ ನಿರ್ವಹಣೆ:-</u>**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಬಡಾವಣೆವಾರು ತಿಂಗಳಿಗೊಮ್ಮೆ ಸೊಳ್ಳೆ ಔಷದಿ ಸಿಂಪಡಿಸಲಾಗುತ್ತಿದ್ದು ವಾರಕೊಮ್ಮೆ ಒಂದು ಪ್ರದೇಶದಲ್ಲಿ ಸಿಂಪಡಿಸುವಂತೆ ಶ್ರೀ ಕುಲಕರ್ಣಿ, ಸದಸ್ಯರು ರವರು ಸಭೆಗೆ ತಿಳಿಸಿದರು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್.ಟಿ, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಗುತ್ತಿಗೆದಾರರಿಗೆ ಸೂಚಿಸಲಾಗುವುದೆಂದು ಸಭೆಗೆ ತಿಳಿಸಿದರು.
2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಕಸ ಸುರಿಯುತ್ತಿದ್ದು, ಕಸ ಸುರಿಯುವವರಿಗೆ ದಂಡ ವಿಧಿಸುವಂತೆ ಹಾಗೂ ದೇವಸ್ಥಾನದ ಬಳಿ ಕಸದ ಪಾಯಿಂಟ್ ಮಾಡಲಾಗಿದ್ದು ಇದನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡುವಂತೆ ಶ್ರೀ ನಾಗಭೂಷಣ.ಆರ್, ಸದ್ಯಸರು ಸಭೆಯ ಗಮನಕ್ಕೆ ತಂದಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ವಿನೋದ್.ಟಿ, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾರ್ಷಲ್‌ಗೆ ಸೂಚಿಸಲಾಗುವುದೆಂದು ಸಭೆಗೆ ತಿಳಿಸಿದರು

- <u>ಬೆಸ್ಕಾಂ–</u>

1. ಶ್ರೀ ಮಹೇಶ್ ಕುಮಾರ್ ಎಸ್. ಕಿರಿಯ ಅಭಿಯಂತರರು ಬೆಸ್ಕಾಂ ರವರು ಸಭೆಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಈ ಕೆಳಕಂಡ ಚದರ ಮೀಟರ್‌ಗಳಂತೆ ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

   Upto 500 Sqm (without Transformers) = ವಿದ್ಯುತ್ ಸಂಪರ್ಕಕ್ಕೆ ಶುಲ್ಕ ಪಡೆಯದೆ ಅನುಮತಿ ನೀಡಲಾಗುವುದು.

   500 Sqm to 800 Sqm (With Transformers) = ಬಿಬಿಎಂಪಿ ರವರಿಂದ ಪಡೆದ ಪ್ರಾರಂಭಿಕ ಪ್ರಮಾಣ ಪತ್ರ ಸ್ವಾಧೀನಪ್ರಮಾಣ ಪತ್ರ ನಕ್ಷೆ ಮಂಜೂರಾತಿ ಇಲ್ಲದಿದರೂ ಶುಲ್ಕ ನಿಗಧಿಪಡಿಸಿ ಅನುಮತಿ ನೀಡಲಾಗುವುದು.

   Above 800 Sqm =ಬಿಬಿಎಂಪಿ ರವರಿಂದ ಪಡೆದ ಪ್ರಾರಂಭಿಕ ಪ್ರಮಾಣ ಪತ್ರ ಸ್ವಾಧೀನಪ್ರಮಾಣ ಪತ್ರ ನಕ್ಷೆ ಮಂಜೂರಾತಿ ಪಡೆದುಕೊಂಡು ಶುಲ್ಕ ನಿಗಧಿಪಡಿಸಿ ಅನುಮತಿ ನೀಡಲಾಗುವುದು.
2. ಶ್ರೀ ಮಹೇಶ್ ಕುಮಾರ್ ಎಸ್. ಕಿರಿಯ ಅಭಿಯಂತರರು ಬೆಸ್ಕಾಂ ರವರು ಡಾ॥ ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದ ಕಟ್ಟಡದಲ್ಲಿ ವಿದ್ಯುತ್ ಉಪಯೋಗಿಸುತ್ತಿದ್ದು, ಇದುವರೆಗೂ ವಿದ್ಯುತ್ ಬಿಲ್ ಪಾವತಿಸಲಾಗಿವೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಹಾಯಕ ಅಭಿಯಂತರರು ಬಿಬಿಎಂಪಿ ರವರು ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ಅನುಮೋದನೆ ಪಡೆದು ಬಿಲ್ ಪಾವತಿಸಲಾಗುವುದೆಂದು ಸಭೆಗೆ ತಿಳಿಸಿದರು

- **<u>ಮಳೆ ನೀರುಗಾಲುವೆ</u>**

1. ವಾರ್ಡ್ ವ್ಯಾಪ್ತಿಯ ಸಲ್ಲಾಪುರಿಯಾ ಅಪಾರ್ಟ್‌ಮೆಂಟ್ ಬಳಿ ರಸ್ತೆ ಅಗಲೀಕರಣ ಮಾಡಲಾಗಿದ್ದು, ಅದೇ ಅಡ್ಡ ರಸ್ತೆಯಲ್ಲಿ ಚರಂಡಿಯಲ್ಲಿ ಚರಂಡಿಯುವ ರಸ್ತೆಯ ಕಳೆಭಾಗದಲ್ಲಿದ್ದು, ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯದೆ ರಸ್ತೆಯಲ್ಲಿಯೇ ಹರಿಯುತ್ತಿದ್ದು, ಇದರ ಸಭೆಯಲ್ಲಿ ಶ್ರೀ ನಾಗಭೂಷಣ ರವರು ತಿಳಿಸಿರುತ್ತಾರೆ.

- **<u>ಕಾಮಗಾರಿ</u>**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಚರಂಡಿಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಂಬಂಧಪಟ್ಟ ಅಭಿಯಂತರರಿಗೆ ಕ್ರಮ ವಹಿಸುವಂತೆ ಶ್ರೀ ನಾಗಭೂಷಣ ಸದಸ್ಯರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಹಾಯಕ ಅಭಿಯಂತರರು, ಬಿಬಿಎಂಪಿ/ ಕಾರ್ಯದರ್ಶಿ ರವರು ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ಅಲ್ಪಾವಧಿ ಕೋಟೇಷನ್' ಕರೆದು, ಕಾರ್ಯದೇಶ ನೀಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಕೆಲವು ಕಡೆ ಸಿಸಿ ಕ್ಯಾಮಾರಗಳನ್ನು ಅಳವಡಿಸಿದ್ದು, ಸರಿಯಾಗಿ ನಿರ್ವಹಿಸುತ್ತಿಲ್ಲ/ ಚಾಲನೆಯಲ್ಲಿರುವುದಿಲ್ಲವೆಂದು ಶ್ರೀ ಕುಲಕರ್ಣಿ ಸದಸ್ಯರು ಸಭೆಗೆ ತಿಳಿಸಿದರೂ ಈ ಬಗ್ಗೆ ಸಹಾಯಕ ಅಭಿಯಂತರರು, ಬಿಬಿಎಂಪಿ ರವರು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

Scanned with

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 189 ಹಾಗೂ ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with